# ನಾಡಗೀತೆಗೆ ನೂರು ವರ್ಷ

ಕರ್ನಾಟಕದ ನಾಡಗೀತೆ ಕುವೆಂಪು ಸೃಷ್ಟಿಸಿದ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ...' ರಚನೆಯಾಗಿ ಇದೀಗ ನೂರು ವರ್ಷಗಳು ಸಂದಿವೆ. 1930ರಲ್ಲಿ ಪ್ರಕಟವಾದ ಕುವೆಂಪು ಅವರ ಮೊದಲ ಕವನ ಸಂಕಲನ 'ಕೊಳಲು' ಕೃತಿಯಲ್ಲಿ ಈ ಗೀತೆಯಿದೆ. 2004ರಲ್ಲಿ ಕರ್ನಾಟಕ ಸರ್ಕಾರ ಇದನ್ನು ನಾಡಗೀತೆಯನ್ನಾಗಿ ಸ್ವೀಕರಿಸಿತು. ಕುವೆಂಪು ಅವರ ಆರಂಭಿಕ ದಿನಗಳಲ್ಲಿ ಮೈ ಪಡೆದ ಈ ಕವಿತೆ ಸರಳವಾದ ಭಾಷೆ, ಲಯದ ಸಾಮರಸ್ಯ, ವರ್ಣನೆಯಲ್ಲಿ ಸಮತೋಲನತೆ ಈ ಕವಿತೆಯನ್ನು ಸ್ಮರಣೀಯವಾಗಿಸಿವೆ. ವಸಾಹತುಶಾಹಿ ಸೃಷ್ಟಿಸಿದ್ದ ದುಮ್ಮಾನಗಳು, ರಾಜಕೀಯ ದಾಸ್ಯದಿಂದ ವಿಮೋಚನೆಗೊಳ್ಳಲು ನಡೆಯುತ್ತಿದ್ದ ರಾಷ್ಟ್ರೀಯ ಹೋರಾಟ, ಇವುಗಳ ಜೊತೆಗೆ ಕನ್ನಡ ನಾಡಿನ ಏಕೀಕರಣಕ್ಕಾಗಿ ರಾಜ್ಯಾದ್ಯಂತ ಏಳುತ್ತಿದ್ದ ಕೂಗು, ಇವೆಲ್ಲವನ್ನೂ ಒಂದೇ ಕಟ್ಟಿನಲ್ಲಿ ಮೇಳೈಸಿ, ಯಾವುದೂ ಮೇಲುಗೈಯಾಗದಂತೆ, ಯಾವುದೂ ಯಾವುದರ ಅಡಿಯಾಳಾಗದಂತೆ ಎಚ್ಚರದಿಂದ ನೋಡಿಕೊಂಡ ಕನ್ನಡದ ಚಿಂತಕರು, ಲೇಖಕರು ಮತ್ತು ಹೋರಾಟಗಾರರ ಬಗೆಯಿದೆಯಲ್ಲ ಅದು ಅಂದಿಗೂ, ಇಂದಿಗೂ ವಿಶಿಷ್ಟವಾದದ್ದು.

ಒಕ್ಕೂಟ ವ್ಯವಸ್ಥೆಯೊಳಗಿದ್ದೂ ತನ್ನ ಸಾಂಸ್ಕೃತಿಕ ಅಸ್ಮಿತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುವ ನಾಡಿನ ಬಹುರೂಪತೆಯನ್ನು ಈ ನಾಡಗೀತೆ ಒಳಗೊಂಡಿದೆ. ಈ ಮೂಲಕ ಒಕ್ಕೂಟ ವ್ಯವಸ್ಥೆ ಪ್ರತಿಪಾದಿಸುವ 'ಏಕರೂಪತೆ'ಯ ಒಂದೇ ಭಾಷೆ, ಒಂದೇ ಸಂಸ್ಕೃತಿ, ಒಂದೇ ಚಿಂತನಾ ರೂಪ, ಒಂದೇ ಆಚರಣೆ, ಒಂದೇ ನಂಬಿಕೆಗಳನ್ನು ತಿರಸ್ಕರಿಸುತ್ತಾ 'ಎಲ್ಲವೂ' ಇರಬೇಕು ಹಾಗೂ ಸ್ವತಂತ್ರ ಉಳಿಸಿಕೊಂಡು 'ಎಲ್ಲವೂ ಒಂದಾಗಿರಬೇಕು' ಎನ್ನುವುದನ್ನು ಕಾಣಿಸುತ್ತದೆ. 'ಉತ್ಕೃಷ್ಟ ಏಕತೆ' ಎನ್ನುವುದು ಕೇವಲ ಅಧ್ಯಾತ್ಮಿಕ ಚಿಂತನೆಯಲ್ಲಿರುವುದಿಲ್ಲ! ಅದು ಬಹುಸಂಸ್ಕೃತಿ, ಬಹುಭಾಷೆ, ಬಹುರೂಪದ ಚಿಂತನೆ ಹಾಗೂ ವೈವಿಧ್ಯಮಯವಾದ ಆಚರಣೆಗಳನ್ನು ನಿರಾಕರಿಸದೆ, ಅವುಗಳ ಒಳಗೊಳ್ಳುವಿಕೆಯಲ್ಲಿರುತ್ತದೆ. ಭೂಮಿಯ ಮೇಲಿನ ಯಾವ ಅಧಿಕಾರವೂ ಇಂತಹ ಬಹುತ್ವವನ್ನು ದಮನಿಸಬಾರದು.

ಬಹುಸಂಸ್ಕೃತಿ, ಬಹುಧರ್ಮಗಳ ಉಲ್ಲೇಖದ ಜೊತೆಗೆ ಎಲ್ಲ ಸಮುದಾಯಗಳ ಸಂಗಮ ಹಾಗೂ ನಾಡಿನ ಜನಸಾಮಾನ್ಯರನ್ನು ಒಳಗೊಂಡ ಲೋಕಹಿತ ಈ ನಾಡಗೀತೆಯ ತಳಹದಿಯಾಗಿದೆ. 'ಜಯ ಸುಂದರ ನದಿವನಗಳ ನಾಡೆ / ಜಯ ಹೇ ರಸಋಷಿಗಳ ಬೀಡೆ! / ಭೂದೇವಿಯ ಮಕುಟದ ನವಮಣಿಯೆ, ಗಂಧದ ಚಂದದ ಹೊನ್ನಿನ ಗಣಿಯೆ' ಎಂದು ಹೇಳುತ್ತಾ 'ಕೃಷ್ಣ ಶರಾವತಿ ತುಂಗಾ / ಕಾವೇರಿಯ ವರ ರಂಗ' ಎಂದು ಭೂ ರಮಣೀಯತೆ ಹಾಗೂ ಕರ್ನಾಟಕದ ಉತ್ತರ ಹಾಗೂ ದಕ್ಷಿಣದ ನದಿಗಳನ್ನು ಬೆಸೆಯುವ ಮೂಲಕ ಕರ್ನಾಟಕವನ್ನು ಭಾವನಾತ್ಮಕವಾಗಿ ಒಗ್ಗೂಡಿಸುತ್ತಾರೆ. ಇದು ಈ ಗೀತೆಯ ತನ್ಮಯಗೊಳಿಸುವ ಭಾಗ. ಇದಕ್ಕೆಲ್ಲಾ ಕಳಸವಿಟ್ಟಂತೆ ಈ ಗೀತೆ, ನಮ್ಮ ಭೌತಿಕ ತಿಳಿವನ್ನು ಮೀರಿ ಅನಂತತೆಯ ಕಡೆ ಚಲಿಸುವಂತೆ 'ಸರ್ವಜನಾಂಗದ ಶಾಂತಿಯ ತೋಟ...' ಎಂಬ ಸರ್ವಧರ್ಮದ ಹರಿಗೋಲಿನಿಂದ ಮೀಟುತ್ತದೆ. ಇವೆಲ್ಲವೂ ಕುವೆಂಪು ಅವರ ಸಮಗ್ರ ಕೃತಿಗಳ ವೈಚಾರಿಕ ಕಾಳಜಿಯಾದ 'ಸರ್ವೋದಯ' ತತ್ತ್ವದ ಮುಂದುವರಿಕೆಯೇ ಆಗಿದೆ. ಮಾನವತೆಯ ಏಕತೆಯನ್ನು ಬಯಸುವ 'ಸರ್ವಜನಾಂಗದ ಶಾಂತಿಯ ತೋಟ' ಎಂಬ ರೂಪಕವಂತೂ ಈ ಯುಗದ ಘೋಷವಾಕ್ಯದಂತಿದೆ.

ಆಳಿದ ರಾಜವಂಶದವರ ಬಗ್ಗೆ ಹೇಳುವ ಸಂದರ್ಭದಲ್ಲಿ ಕುವೆಂಪು ಕೇವಲ ಕರ್ನಾಟಕದ ಅರಸು ಮನೆತನಗಳನ್ನು ಮಾತ್ರ ಹೇಳುತ್ತಾರೆ. ಆದರೆ ಸಂತರ ವಿಚಾರದಲ್ಲಿ ಮಾತ್ರ ಕುವೆಂಪು ಕರ್ನಾಟಕವನ್ನು ಒಳಗೊಂಡೂ ಭಾರತದ ಸಂತ ಪರಂಪರೆಯನ್ನೇ ನಮ್ಮ ಮುಂದಿರಿಸುತ್ತಾರೆ. ಶಂಕರ, ರಾಮಾನುಜ, ಬಸವಣ್ಣ, ನಾನಕ, ರಾಮಾನಂದ, ಕಬೀರ, ಚೈತನ್ಯ, ಪರಂಮಹಂಸ, ವಿವೇಕಾನಂದ ಹೀಗೆ ಜ್ಞಾನದ ಬೆಳಕಿನ ಮಹಾ ಪ್ರಭಾವಳಿಯನ್ನೇ ನಮ್ಮ ಮುಂದಿಡುತ್ತಾರೆ. ನಾಡಿನ ಭಾಷೆಯ ಪ್ರಶ್ನೆ ಬಂದಾಗಲೆಲ್ಲ ಕನಲುವ ಕುವೆಂಪು, ಈ ಕವಿತೆಯಲ್ಲಿ ನಾಡಿನ ಸಾಂಸ್ಕೃತಿಕ ಹಾಗೂ ಭಾರತೀಯ ಸಂತ ಪರಂಪರೆ ಹಾಗೂ ಕನ್ನಡ ಸಾಹಿತ್ಯ ಪರಂಪರೆಯನ್ನು ಕುರಿತು ಹೇಳುವಾಗ ಮೃದುವಾಗುವುದು ಗಮನಾರ್ಹವಾಗಿದೆ.

'ಕುವೆಂಪು ಅವರು ತಮ್ಮ ಕವಿತೆಗಳ ಮೂಲಕವೇ ಕರ್ನಾಟಕವನ್ನು ಒಂದಾಗಿ ಕಟ್ಟಲು ಪ್ರಯತ್ನ ಮಾಡಿದರು. ಕುವೆಂಪು 'ಡಿಂಡಿಮ' ಅಂತ ಹೇಳಿದವರು, 'ಭಾರತ ಜನನಿಯ ತನುಜಾತೆಯಾದ' ಕರ್ನಾಟಕದ ಬಗ್ಗೆ ಮಾತನಾಡಿದವರು ಕುವೆಂಪು. ನಿಜವಾಗಲೂ ನನಗೆ ರಾಜ್‌ಕುಮಾರ್ ಮತ್ತು ಕುವೆಂಪು ಅವರ ಹೋಲಿಕೆ ಬಹಳ ವಿಚಿತ್ರ ಅನಿಸುತ್ತೆ. 'ಜಯಭಾರತ ಜನನಿಯ ತನುಜಾತೆ' ಇದೆಯಲ್ಲ, ನಮ್ಮ ನಾಡಗೀತೆ, ಅದನ್ನು ದಯವಿಟ್ಟು ಕೇಳಿಸಿಕೊಳ್ಳಿ. ಅದು ಏಕಕಾಲದಲ್ಲಿ ಭಾರತದ ಸಂತರ ಬಗ್ಗೆ ಮಾತನಾಡುತ್ತೆ. ನಾನಕ, ರಾಮಾನಂದ, ಕಬೀರ ಎಲ್ಲರೂ ಅಲ್ಲಿ ಬರುತ್ತಾರೆ. ಹಾಗೆಯೇ ಕರ್ನಾಟಕದ ಸಂತರ ಬಗ್ಗೆಯೂ ಮಾತನಾಡುತ್ತೆ. ಬಸವೇಶ್ವರ ಇತ್ಯಾದಿ.. ಅಂದರೆ, ಏಕಕಾಲದಲ್ಲಿ ಭಾರತದ ಸಂತ ಪರಂಪರೆ, ನಾಯಕ ಪರಂಪರೆ ಎರಡನ್ನೂ ಒಟ್ಟಿಗೆ ಹೇಳುವಂಥ ಹಾಡು ಕುವೆಂಪು ಅವರದ್ದು. ಇಡೀ ಭಾರತದ ಸಂತ ಪರಂಪರೆ ಮತ್ತು ಕರ್ನಾಟಕದ ಸಂತ ಪರಂಪರೆ ಇವುಗಳನ್ನು ಬೆಸುಗೆ ಹಾಕುವುದರ ಮೂಲಕ ಕರ್ನಾಟಕ ಭಾರತ ಜನನಿಯ ತನುಜಾತೆ ಅನ್ನುವುದನ್ನು ಇನ್ನೊಂದು ರೀತಿಯಲ್ಲಿ ತೋರಿಸಿಕೊಟ್ಟರು' (ಎಚ್.ಎಸ್. ರಾಘವೇಂದ್ರ ರಾವ್).

ವಿವೇಕಾನಂದ, ಗಾಂಧೀಜಿಯವರ ವೈಚಾರಿಕತೆ ಮತ್ತು ಟಾಲ್‌ಸ್ಟಾಯ್ ಹಾಗೂ ರವೀಂದ್ರರ ಸೌಮ್ಯತೆಯ ಉದಾರ ಚಿಂತನೆಗಳು ಕುವೆಂಪು ಅವರನ್ನು ರೂಪಿಸಿವೆ. ಆದ್ದರಿಂದಲೇ ಈ ಯುಗದ ಹುಣ್ಣಾಗಿ ಭಾರತವನ್ನು ನಿತ್ಯವೂ ಗಾಯಗೊಳಿಸುತ್ತಿರುವ ಧಾರ್ಮಿಕ ಮತಾಂಧತೆ, ಅಸಹಿಷ್ಣುತೆ ಮುಂತಾದ ಸಂಕುಚಿತ ಭಾವನೆಗಳಿಗೆ ಕುವೆಂಪು ಅವರ ಸಮಗ್ರ ಕೃತಿಗಳಲ್ಲಿ ಸ್ಥಳಾವಕಾಶವಿಲ್ಲ. ಪರಸ್ಪರ ಸಹನೆ ಮತ್ತು ಸಾಮಾಜಿಕ ಮತ್ತು ಧಾರ್ಮಿಕ ವೈವಿಧ್ಯತೆಗಳು ಮಾತ್ರ ಸಮಾಜವನ್ನು ಸಹ್ಯವಾಗಿಸಬಲ್ಲದು ಎಂಬುದನ್ನು ಈ ಗೀತೆ ಉನ್ನತಮಟ್ಟದ ರೂಪಕದಲ್ಲಿ ಹೇಳುತ್ತದೆ. ಕುವೆಂಪು ಅವರ 'ವಿಶ್ವಮಾನವ ತತ್ತ್ವ'ದ ಬೀಜಗಳು ಹುದುಗಿರುವುದು ಇಲ್ಲಿಯೇ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಹುಲಿ ಕರಡಿಗಳಿಗೆ ಯಾರೂ ಹೆದರುವುದಿಲ್ಲ. ಮನುಷ್ಯ ಹೆದರಬೇಕಾದುದು ಮನುಷ್ಯನಿಗೆ.
  —ಅನಕೃ
- ಜನಾಭಿಪ್ರಾಯವನ್ನು ಧಿಕ್ಕರಿಸುವ ಸರ್ಕಾರವನ್ನು ಜನರೂ ಧಿಕ್ಕರಿಸುತ್ತಾರೆ.
  —ಮಹಾತ್ಮ ಗಾಂಧಿ
- ಅನುಭವಗಳೇ ಮಾನವನಿಗೆ ರೂಪವನ್ನು ನೀಡುತ್ತವೆ.
  —ಗೆಲಿಲಿಯೊ
- ಮಾನವನ ಇತಿಹಾಸವನ್ನು ಶಿಕ್ಷಣ ಮತ್ತು ಅನಾಹುತಗಳ ನಡುವೆ ನಡೆಯುವ ಓಡಾಟದ ಜೂಜಿನ ಕಥೆ ಎಂದೂ ಹೇಳಬಹುದು.
  —ಎಚ್.ಜಿ. ವೆಲ್ಸ್
- ನಮ್ಮ ಬಗ್ಗೆ ನಂಬಿಕೆ ಇದ್ದರೆ ಮಾತ್ರ ಭವಿಷ್ಯದಲ್ಲಿ ನಮಗೆ ನಂಬಿಕೆಯಿರುತ್ತದೆ.
  —ಜಾನ್ ಎಫ್. ಕೆನಡಿ
- ಸೋಮಾರಿತನ ಮನುಷ್ಯನಲ್ಲಿ ನೆಲೆಸಿರುವ ಮಹಾಶತ್ರು. ಉದ್ಯೋಗದಂತಹ ಬಂಧು ಬೇರೊಬ್ಬನಿಲ್ಲ. ಉದ್ಯೋಗ ಮಾಡಿ ಮನುಷ್ಯ ದುಃಖಿಸಲಾರ.
  —ಭರ್ತೃಹರಿ
- ಮಾಂಸ ದೊರೆಯದೆ ಬಡವ ಪರಿತಪಿಸಿದರೆ, ಅದು ಜೀರ್ಣವಾಗದೆ ಶ್ರೀಮಂತ ಪರಿತಪಿಸುತ್ತಾನೆ.
  —ಹೆನ್ರಿ ಗೈಲ್ಸ್
- ದಾರ ಹರಿದ ಗಾಳಿಪಟದಂತೆ ಮನಸ್ಸು ಗಾಳಿಯೊಡನೆ ಹಾಯಾಗಿ ತೇಲುತ್ತದೆ..
  —ಗೋಪಾಲಕೃಷ್ಣ ಅಡಿಗ